ನಿರ್ಧಾರಕ್ಕೆ ಬಂದವಳಂತೆ, "ಯುವ ಸನ್ಯಾಸಿಯೇ, ನೀವು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಒಬ್ಬ ಪ್ರಾಮಾಣಿಕ ನ್ಯಾಯಾಧಿಪತಿಯಾಗಿ ನಾನು ಹೇಳಿದ ಷರತ್ತನ್ನು ನಾನೇ ಮೀರಲಾಗದು. ನನ್ನ ಪತಿ ಸೋತು ಹೋಗಿರುವುದಾಗಿ ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಒಬ್ಬ ಪತ್ನಿ ಅವಳ ಪತಿಯ ಅರ್ಧ ಎಂದು ಶಾಸ್ತ್ರಗಳು ಹೇಳುತ್ತವೆ. ಆದ್ದರಿಂದ ನಿಮ್ಮ ಜಯ ಅರ್ಧ ಮಾತ್ರವೇ. ಪೂರ್ಣವಲ್ಲ. ಆದ್ದರಿಂದ, ನನ್ನೊಂದಿಗೂ ವಾದ ಮಾಡಿ ನನ್ನನ್ನೂ ಗೆದ್ದರೆ ಮಾತ್ರ ನೀವು ಪೂರ್ಣ ಜಯಶಾಲಿಯಾಗುವಿರಿ. ನನ್ನ ಈ ಪ್ರಶ್ನೆಗಳಿಗೆ ಉತ್ತರ ಹೇಳಿ" ಎಂದವಳು, ಶಂಕರರ ಬಳಿ ಕಾಮಶಾಸ್ತ್ರಗಳಿಂದ ಕಷ್ಟಕರವಾದ ಪ್ರಶ್ನೆಗಳನ್ನು ಕೇಳಲು ತೊಡಗಿದಳು. ಅವನ್ನು ಕೇಳುವಾಗ ಅವಳ ಮುಖದಲ್ಲಿ ಯಾವ ಸಂಕೋಚವೂ, ಸಂಕಟವೂ ಗೋಚರಿಸದೆ ಒಬ್ಬ ನಿರ್ಲಿಪ್ತ ಜ್ಞಾನಿಯಂತೆ ಕಂಡಳು.

ಶಂಕರರು ಒಂದು ಕ್ಷಣ ಗಾಬರಿಯಾಗಿ ತಮ್ಮ ಕಣ್ಣುಗಳನ್ನು ನೆಲದಕಡೆ ತಗ್ಗಿಸಿದರು. "ನಾನು ಸನ್ಯಾಸಿ, ಈ ವಿಷಯಗಳಲ್ಲಿ ನನಗೆ ಅನುಭವ ಇಲ್ಲ. ನನಗೆ ಒಂದು ತಿಂಗಳು ಅವಕಾಶ ಕೊಡಿ. ನಿಮ್ಮ ಪ್ರಶ್ನೆಗಳಿಗೆ ಉತ್ತರದೊಂದಿಗೆ ಬರುತ್ತೇನೆ..." ಎಂದರು. ಸರಸವಾಣಿ ಮೆಲ್ಲಗೆ ಮುಗುಳ್ನಗುತ್ತ ಸಮ್ಮತಿಯನ್ನು ಸೂಚಿಸಿದಳು.

ರಾತ್ರಿ ಮೂರನೆಯ ಜಾವವನ್ನು ತಲುಪುತ್ತಿತ್ತು. ಸರಸವಾಣಿ, ಮಂಡನ ಮಿಶ್ರ ಇಬ್ಬರೂ ಶಯನ ಕೋಣೆಯಲ್ಲಿ ನಿದ್ದೆ ಬಾರದೇ ಬಹಳ ಸಮಯ ಎಚ್ಚರದಿಂದಿದ್ದರು. ಸರಸವಾಣಿ ಮಂಡನ ಮಿಶ್ರರ ಅಗಲವಾದ ಎದೆಯಮೇಲೆ ತನ್ನ ಮೃದುವಾದ ಕೈಗಳನ್ನು ಇಟ್ಟಿದ್ದಳು. ಮಂಡನ ಮಿಶ್ರ ಸೂರನ್ನು ನೋಡುತ್ತಾ ಮಂಚದಮೇಲೆ ಅಂಗಾತ ಮಲಗಿದ್ದರು. ಮೇಲೆ ಒಳ ಸೂರಿನಲ್ಲಿ ಮರದಲ್ಲಿ ಕೆತ್ತಿದ ಶಿಲ್ಪಗಳು ಕೋಣೆಯ ಮಂದ ಬೆಳಕಿನಲ್ಲಿ ನೆರಳಿನ ಆಕಾರದಲ್ಲಿ ಕಂಡಿತು. ಒಂದರಲ್ಲಿ ಇಂದ್ರ ಇಂದ್ರಾಣಿಯ ನಡುವನ್ನು ಬಳಸಿ ತಬ್ಬಿಕೊಂಡು ಬಿಳಿಯ ಆನೆಯ ಮೇಲೆ ಕುಳಿತು ದೇವಾಮೃತ ಬೇಡಿ ಯಾಗಶಾಲೆಯ ಕಡೆಗೆ ವೇಗವಾಗಿ ಹೋಗುತ್ತಿದ್ದ. ಮತ್ತೊಂದರಲ್ಲಿ ತಾರುಕಾ ವನದ ಋಷಿಪುಂಗವರು ತಮ್ಮ ಪತ್ನಿಯರೊಂದಿಗೆ ಇಂದ್ರನನ್ನು ಸ್ವಾಗತಿಸಲು ಕೈಗಳಲ್ಲಿ ಸೋಮರಸದೊಂದಿಗೆ ಕಾಯುತ್ತಿದ್ದರು.

ಮಂಡನ ಮಿಶ್ರ ತನ್ನ ಮೇಲೆ ಹರಡಿಕೊಂಡಿದ್ದ ಸರಸವಾಣಿಯ ತಣ್ಣನೆಯ ಕೈಗಳನ್ನು ಹಿಡಿದು ಸೂರಿನ ಶಿಲ್ಪಗಳಿಂದ ಕಣ್ಣು ತೆಗೆಯದೇ, "ಸರಸವಾಣಿ, ಈ ಸ್ಪರ್ಶಕ್ಕೆ ಹದಿನಾಲ್ಕು ಲೋಕವನ್ನೂ ಬಳುವಳಿ ನೀಡಬಹುದು" ಎಂದು ದೀರ್ಘವಾಗಿ ಉಸಿರೆಳೆದು, ಅವಳಿಗೆ ಮಾತ್ರ ಕೇಳಿಸುವಂತೆ ಮೆಲ್ಲನೆಯ ದನಿಯಲ್ಲಿ ಹೇಳಿದರು. ಸರಸವಾಣಿ ಹೊರಳಿ ಮಲಗಿ ಅವರ ತೋಳಿನ ಮೇಲೆ ತನ್ನ ತಲೆಯನ್ನಿಟ್ಟು, "ಗಂಡಸರು ಬಾಯಿ ಮಾತಿನಲ್ಲಿ ನಿಸ್ಸೀಮರು. ಅವರು ತಮ್ಮ ಪತ್ನಿಯರನ್ನು ಹೊಗಳುವ ಮಾತುಗಳನ್ನೆಲ್ಲಾ ಸತ್ಯವೆಂದು ತಿಳಿಯಬಾರದು. ಎಂತಹ ದೇವತೆಗಳಾದರೂ ಸಂದರ್ಭ ಒದಗಿದರೆ, ಅವರನ್ನು ಹಾಗೆಯೇ ತೊರೆದು, ಯಾರಾದರೂ ಸನ್ಯಾಸಿಗಳು ಕರೆದರೆ ಅವರ ಹಿಂದೆ ಹೊರಟುಹೋಗುತ್ತಾರೆ."

ಮಂಡನ ಮಿಶ್ರ ಎದ್ದು ಮಂಚದ ತಲೆಯ ಭಾಗಕ್ಕೆ ಒರಗಿ ಕುಳಿತುಕೊಂಡರು. ಸರಸವಾಣಿ ತನಗೆ ತಾನೇ, "ನಾಳೆಗೆ ಅವರು ಕೇಳಿದ ಒಂದು ತಿಂಗಳ ಕಾಲಾವಧಿ ಮುಗಿಯುತ್ತದೆ...' ಎಂದಳು.

ಮಂಡನ ಮಿಶ್ರ ಅವಳ ತಲೆಯನ್ನು ಪ್ರೀತಿಯಿಂದ ನೇವರಿಸಿದರು. "ಶಂಕರ ಹಿಂತಿರುಗಿ ಬರುವವರೆಂದು ನೀನು ನಂಬುತ್ತೀಯಾ?" ಎಂದು ಅವಳ ಬಳಿ ಕೇಳಿದರು.

ಸರಸವಾಣಿ ಹೇಳಿದಳು, "ಇದನ್ನೇ ಆ ಗಿಳಿಗಳು ನನ್ನ ಬಳಿ ಕೇಳಿದವು. ನೀವು ಈಗ ಕೇಳುತ್ತಿದ್ದೀರಿ.